Regd. No. M[illegible] SATYAVADI Fourn[illegible]

ಸಲಹೆ

' ಆಹಾರ ಪದಾರ್ಥಗಳ ಅಭಾವದ ಕಾರಣದಿಂದ ನಮ್ಮ ದೇಶದಲ್ಲಿ ' ರೇಷನ್ ' ಕಡಿಮೆ ಮಾಡಿದ್ದಾರೆ. ಬಹಳ ಕಷ್ಟವಾಗಿದೆ ' ಜನಗಳೆಲ್ಲರೂ ಎಲ್ಲೆಲ್ಲಿಯೂ ಮಾತಾಡುತ್ತಿದ್ದಾರೆ. ರೇಷ್ನ್ ಕಡಮೆ ಮಾಡಿದ್ದುದರಿಂದ ಈ ಜನಗಳು ' ಕಷ್ಟ ' ಎಂದು ಹೇಳುವುದು ಉಚಿತವಲ್ಲ. ರೈಲ್ವೇ ಕೆಲಸಗಾರರಿಗೆ ಒಂದು ತಿಂಗಳಿನಿಂದಲೂ ರೇಷ್ನ್ ಕೊಡಲೇ ಇಲ್ಲವೆಂದು ಹೇಳುತ್ತಿದ್ದಾರೆ. ಅವರು ಯಾರೂ ಸತ್ತಿಲ್ಲ. ಅವರ ಪಾಡಿಗೆ ಹೆಚ್ಚೊ ಕವಿಯೋ ದುಡ್ದು ಕೊಟ್ಟು ಪದಾರ್ಥಗಳನ್ನು ತೆಗೆದುಕೊಂಡು ಊಟ ಮಾಡಿ ಬದುಕಿಕೊಂಡಿದ್ದಾರೆ. ರೇಷ್ನ್ನು ಕೊಡದೇನೆ ಇದ್ದರೂ ಯಾರಿಗೂ ಏನೂ ಆಗಿಲ್ಲ. ಕಡಿಮೆ ಮಾಡಿದರಿಂದ ಆಗುವ ಪ್ರಳಯವೇನು ? ಅನವಶ್ಯಕವಾಗಿ ಸರ್ಕಾರದವರನ್ನು ದೂರುವ ಉದ್ದಿಶ್ಯದಿಂದಲೇ ಜನಗಳು ' ಕಷ್ಟ, ಕಷ್ಟ ' ಅನ್ನುತ್ತಿದ್ದಾರೆ.

ನಮ್ಮ ದೇಶದಲ್ಲಿ ' ಕಷ್ಟ ' ಅನ್ನುವುದಿಲ್ಲವೇ ಇಲ್ಲ. ಅನೇಕ ಲೋಕೋಪಕಾರಿಗಳು ಇರತಕ್ಕ ದೇಶ ಇದು. ' ಧರ್ಮಪ್ರಕಾಶ ' ' ಧರ್ಮಪ್ರವರ್ತ ' ' ಧರ್ಮರತ್ನಾಕರ ' ' ಲೋಕಸೇವಾನಿರತ ' ' ಲೋಕೋಪಕಾರಿ ' ಇತ್ಯಾದಿ ಇತ್ಯಾದಿಗಳೆಲ್ಲರೂ ಇರುವುದು ನಮ್ಮ ದೇಶದಲ್ಲಿಯೇ. ರೇಷ್ನ್ ಸಾಲದೆಂದು ಹೇಳುವ ಪ್ರತಿಯೊಬ್ಬರಿಗೂ ಅವರವರ ಹೊಟ್ಟೆಗೆ ಹಿಡಿಯುವಷ್ಟು ಅಕ್ಕಿ ಮೊದಲಾದ ಆಹಾರ ಪದಾರ್ಥಗಳನ್ನು ಕೈಯಲ್ಲಿ ಹಿಡಿಯುವಷ್ಟು ಹಣವನ್ನು ಪಡೆದುಕೊಂಡು ದಾನ ಮಾಡುತ್ತಿದ್ದಾರೆ ಅಷ್ಟೊ ಇಷ್ಟೊ ಮಹಾ ವಿಭೂತಿಗಳು ನಮ್ಮ ದೇಶದಲ್ಲಿ ಇರುವಷ್ಟು ಕಾಲವೂ ' ಕಷ್ಟ ' ಎನ್ನುವುದು ಅಪಶಬ್ದ.

ಇನ್ನೊಂದು ವಿಚಾರ. ಪದಾರ್ಥ ದೇಶದಲ್ಲಿ ತುಪ್ಪ ಹೆಚ್ಚಾಗಿ ಬೆಳೆಯುವ ಪದಾರ್ಥವಲ್ಲ. ಅದನ್ನು ಕೈಗೆ ಬಾರದೇ ಇರೋದು ' ಎಂದು ತಿಳುಕೋಬೇಡಿ ಬಹಳ ಅಮೂಲ್ಯವಾದದ್ದು ನಿಮಗೇ ಗೊತ್ತಾಗುತ್ತೆ. ಅದರ ಶ್ರೇಷ್ಠತೆ, ಘನತೆ, ಅಪೂರ್ವತೆ ಎಲ್ಲಾ

ಪೋಲೀಸರು ಮೃದುವಾಗಿ, ಲಘುವಾಗಿ ಲಾಠಿಚಾರ್ಜು ಮಾಡಿ ಕೈಕಾಲು ಮುರಿದು ಹಾಕಿ ತಲೆಬುರುಡೆ ಒಡೆದು ಹಾಕೋದರಿಂದ ಉಪಯೋಗವಿಲ್ಲ ಅನಾವಶ್ಯವಾಗಿ ಆಸ್ಪತ್ರೆ ಡಾಕ್ಟರಿಗೆ ಕೆಲಸ ಜಾಸ್ತಿ ಮಾಡಿ ಡಾಕ್ಟರಿಗೆ ತೊಂದರೆ ಕೊಡಕೂಡದು ಜೈಲಿನಗಳು ಎಲ್ಲಿ ಸೇರಿದ್ದಾರೋ ಅಲ್ಲಿ ಗುಂಡು ಹಾರಿಸಿ ಬಿಡಬೇಕು ಗುಂಡು ಹಾರಿಸಿ ಜಖಂ ಮಾಡಿ ಉಪಯೋಗವಿಲ್ಲ ಹಾಕಿದ ಗುಂಡಿನೇಟಿಗೆ ಉಸಿರೇ ನಿಂತು ಹೋಗಬೇಕು ಹಾಗೆ ಮಾಡಿ ಕೆಲಸದಿಂದ ಎಂಡು ಪ್ರಯೋ ಸುಲಭವಾಗಿ ಶಾಂತಿ ಸ್ಥಾ ಒಂದು. ನಮ್ಮ ದೇ ಕಡಿಮೆಯಾದರೆ ಉ ಷ್ಟ ' ಹೆಚ್ಚು ಸಿಕ್ಕು ನೇನೇ ಹೇಳಿ, ಆ ಧಾನ್ಯಗಳಿ ಕೊರತೆ ಇ ರುವುದೇ ಇಲ್ಲ ಹೇಗಿದೆ ನನ್ನ ಸಲಹೆ ?

ದಿವಾನರ ಸುಧಾರಣಾ ಸಲಹಾ ಸಮಿತಿಯವರು ಮಾಡಿರುವ ಸಲಹೆಗಳಿಗಿಂತ ನನ್ನ ಸಲಹೆ ಚನ್ನಾಗಿಲ್ಲವೇ ? ಅಹುದಾದರಹುದೆನ್ನಿ ಇಲ್ಲವಾದರಿಲ್ಲವೆನ್ನಿ

" ಮಲ್ಲ "

ಪ್ಲಾಜ್ಯಾಂಡ್ಸ್
ನೇ ವಾರ
— ಬೇಜಿ ಮಾಧುರಿ
ವಹಿಸಿರುವ
ಸೈಮಾ
ಅಮೋಘ ಹಿಂದಿ ಚಿತ್ರ)
ತಿ ದಿನ 3 ಆಟಗಳು

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 31 ಸಂಚಿಕೆ 13] ಸೋಮವಾರ 6—10—47 [ಬಿಡಿ ಪ್ರತಿ 3 ಪೈ

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಯರಿಂದ)

ಮೇಷ — ಶತ್ರುಗಳಿಂದ ಸ್ವಲ್ಪ ತೊಂದರೆ. ಧನವ್ಯಯವಿರುವುದಿಲ್ಲ. ವ್ಯವಹಾರದಲ್ಲಿ ಚಿಂತೆ.

ವೃಷಭ— ಅನುಕೂಲವಾದ ವಾರ ಆರೋಗ್ಯ ಉತ್ತಮ, ವ್ಯವಹಾರದಲ್ಲಿ ಜಯ.

ಮಿಥುನ— ಸುಖದಿಂದ ಕೂಡಿದ ವಾರ, ಉತ್ಸಾಹ, ಲಾಭ, ಆರೋಗ್ಯ ಚೆನ್ನಾಗಿರುತ್ತೆ.

ಕರ್ಕಾಟಕ— ಗ್ರಹಗತಿಗಳು ಸ್ವಲ್ಪ ಕ್ರೂರವಾಗಿವೆ. ದ್ರವ್ಯ ನಷ್ಟ, ಆರೋಗ್ಯಕ್ಕೆ ಧಕ್ಕೆಯಿಲ್ಲ, ದೋಷ ವಾರೋಪಣೆಗೆ ಅವಕಾಶವಿದೆ.

ಸಿಂಹ — ಆರೋಗ್ಯವಿರುವುದಿಲ್ಲ, ವ್ಯವಹಾರದಲ್ಲಿ ತೊಂದರೆ.

ಕನ್ಯಾ—ಎಲ್ಲ ವಿಧದಲ್ಲೂ ಅನುಕೂಲವಾದ ವಾರ.

ತುಲ— ಶತ್ರುಗಳ ಭಯ ದೂರವಾಗುತ್ತೆ. ವ್ಯವಹಾರದಲ್ಲಿ ಅನುಕೂಲವುಂಟು

ವೃಶ್ಚಿಕ — ಶುಭ ಸೂಚಕವಾದವಾರವಿದು ಹೆದರಬೇಡಿ ಲಾಭವುಂಟು

ಧನಸ್ಸು — ಜಯದಿಂದ ಕೂಡಿದವಾರವಿದು ಆರೋಗ್ಯವು ಉತ್ತಮವಿರುವುದಿಲ್ಲ

ಮಕರ — ಪ್ರಯತ್ನಗಳು ವಿಫಲವಾಗುವುವು ಆರ್ಥಿಕ ಸ್ಥಿತಿಯು ಮಂದವಾಗಿರುತ್ತದೆ ವ್ಯವಹಾರದಲ್ಲಿ ಧನವ್ಯಯ

ಕುಂಭ — ಕಾರ್ಯ ಸಾಧನೆಯೋಗವಿರುವ ವಾರ ಆರ್ಥಿಕ ಆರೋಗ್ಯ ಉತ್ತಮ

ಮೀನ — ಅನುಕೂಲವಾದ ವಾರ ಕಷ್ಟಗಳು ಇವು ಆನಂದ

ಅರಮನೆ ಮುಂದೆ ಸತ್ಯಾಗ್ರಹಕ್ಕೆ ನಿಂತ ಹೊರಟ ನಾಲ್ಕು ಮಂದಿ ಕೊಯ್ಮುತ್ತೂರು ಸತ್ಯಾಗ್ರಹಿಗಳು ನಿನ್ನೆ ರಾತ್ರಿ ದೇವರಾಜ ಮಾರ್ಕೆಟ್ ಚೌಕದಲ್ಲಿ ದಸ್ತಗಿರಿ ಯಾದರು ಜನರನ್ನು ಚದುರಿಸುವಾಗ ಹಲವರಿಗೆ ಲಾಟಿ ಏಟು ಬಿದ್ದವು ನೂರಡಿ ರಸ್ತೆಯಲ್ಲಿ ಪೋಲೀಸ್ ವ್ಯಾನಿಗೆ ಕಲ್ಲಿನೇಟುಗಳು ತುಂಬಾ ಬಿದ್ದವು

ಬೆಂಗಳೂರು ಅ 4 — ಮುಷ್ಕರ ಹೂಡಿರುವ ರೈಲ್ವೆ ಕಾರ್ಮಿಕರ ಪತ್ನಿಯರು ಮತ್ತು ಮಕ್ಕಳು ರೈಲ್ವೆ ಕ್ವಾರ್ಟರ್ಸ್‌ನಿಂದ ದಿವಾಕ್ ಬಂಗಲೆಗೆ ರೇಷ್ನ್ ಕೊಡಿಸಬೇಕೆಂದು ನೆರವಣಿಗೆ ಹೋದರು ಪೋಲೀಸರು ಅವರನ್ನು ಹಿಂಬಾಲಿಸಿ ನಾಳೆಯಿಂದ ರೇಷ್ನ್ ಕೊಡಿಸುವುದಾಗಿ ಭರವಸೆಯಿತ್ತು ಚದುರಿಸಿದರು

ಕಾಂಗ್ರೆಸ್ ಮುಖಂಡರ ಬಿಡುಗಡೆ ಮತ್ತು ಜನರ ಆಶಾಕಾಂಕ್ಷೆ ಈಡೇರಬೇಕೆಂದು ಇವತ್ತಿನಿಂದ ಪಾರ್ಶ್ವನಾಥ ೪ ದಿನ ಉಪವಾಸ ಮಾಡಿದರು

ಮುನ್ನೂರು ಮಂದಿ ಸತ್ಯಾಗ್ರಹಿಗಳು ಕೊಡುತ್ತಿರುವ ಆಹಾರ ಸರಿಯಿಲ್ಲವೆಂದು ತಾ || 2 ರ ರಾತ್ರಿಯಿಂದ ಮೈಸೂರು ನೆರೆಮನೆಯಲ್ಲಿ ಉಪವಾಸವಾರಂಭಿಸಿದ್ದಾರೆ ಎಂದು ತಿಳಿಯಬಂದಿದೆ.

ಅನೇಕ ಮಂದಿ ಚಿಕ್ಕವರು ಕೆಟ್ಟ ಆಹಾರಪ್ರಯುಕ್ತ ಆಮಶಂಕೆ ಮತ್ತಿತರ ಖಾಯಿಲೆಯಿಂದ ನರಳುತ್ತಿದ್ದಾರೆ

(ಫ್ರೀ ಪ್ರೆಸ್ ಜ)

ಭಾರತದ ಗಲಭೆ ಬಗ್ಗೆ ಟೋರಿ ಪರಿಷತ್ತಿನಲ್ಲಿ ಲೇಬರ್ ಸರ್ಕಾರವನ್ನು ಚರ್ಚಿಲ್ ಆಕ್ಷೇಪಿಸಿರುವರು

ನವಬೆಹಲಿ ಅ 3 — ಪಶ್ಚಿಮ ಬಂಗಾಳಾ ಸರ್ಕಾರವು ಕಲ್ಕತ್ತಾ ಎಲೆಕ್ಟ್ರಿಕ್ ಕಂಪೆನಿಯನ್ನು ಕೊಳ್ಳಲು 30 ಕೋಟಿ ರೂ ಸಾಲವನ್ನು ಭಾರತ ಸರಕಾರವು ಅನುಕೂಲವಾಗಿ ಯೋಚಿಸಬಹುದೆಂದು ಹೇಳಲಾಗಿದೆ.

ಕಲ್ಕತ್ತಾ ಅ 3— ಪಶ್ಚಿಮ ಬಂಗಾಳಾದಲ್ಲಿ ಕಾಳಸಂತೆ ಮಟ್ಟಹಾಕಲು ಆರ್ಡಿನೆನ್ಸ್ ತೆಗೆಯುವವರಾಗಿದ್ದಾರೆ

ನವಬೆಹಲಿ ಅ 5— ಭಾರತ ಸರಕಾರವು ಕಾಥಿವಾಡ ಸಂಸ್ಥಾನಗಳ ಕೇಳಿಕೆಯಂತೆ ಪೋರ್‌ಬಂದರಿಗೆ ಸೈನ್ಯ ಕಳುಹಿಸಿದೆ.

At Opera
From 4-10-47
PHANTOM
(Serial)

Edited, Printed and Published by M. S Krishna Rao at the Satyavadi Press Ch Agrahar Mysore.

ಕಾ ॥ 6-10-47 ॥ ಶ್ರೀ ॥ ನಂ. 56

"ಪ್ರಬೋಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಪ್ರಬೋಧದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಸಂಘದ ಕಾರ್ಯದರ್ಶಿ, ದೂರ್ವಾಸಪುರಂ, ಶಿವಮೊಗ್ಗಾ ಜಿಲ್ಲಾ

ಭಕ್ತ ವ್ಯಾಧ

(ಸನ್ಮಾರ್ಗ)

(ಹಿಂದಿನ ಸೋಮವಾರದ ಸಂ
ಯಿಂದ ಮುಂದುವರಿದುದು)

ಭಕ್ತ ನರಸಿಂಹ ಮೊಹತನ ಸಂಸರ್ಗದಿಂದ ಪರ್ವತದಾಸನಲ್ಲಿ ಹೊಸ ಜೀವನವು ಪ್ರಾಪ್ತವಾಗಿದ್ದಿತು. ಪ್ರತಿ ವರ್ಷ ಆರಾರು ತಿಂಗಳು ಬಲಗೈಯಲ್ಲಿ ತುಳಸೀಯನ್ನು ಹಿಡಿದುಕೊಂಡು ದ್ವಾರಕಿಗೆ ಹೋಗಿ, ಗೋಮತಿಯಲ್ಲಿ ಮಿಂದು, ತುಳಸೀಪತ್ರವನ್ನು ದ್ವಾರಕಾಧೀಶನಿಗರ್ಪಿಸಿ, ಸಂದರ್ಶನ ಮಾಡಿ, ಮನೆಗೆ ಬರಬೇಕು ಎಂದು ಪರ್ವತದಾಸನು ಪ್ರತಿಜ್ಞೆ ಮಾಡಿ, ಅದರಂತೆ ನಡೆಯುತ್ತಾ ಬಂದನು. ಅರವತ್ತೆಂಟನೇ ವಯಸ್ಸಿನ ವರೆಗೆ ಈ ಪ್ರತಿಜ್ಞೆಯು ನಿರ್ವಿಘ್ನವಾಗಿ ನಡೆಯಿತ್ತು. ಆದರೆ ಈಗ ವಾರ್ಧಕ್ಯದಿಂದ ಶರೀರವು ಕ್ಷೀಣಿಸುತ್ತಾ ಬಂದು ನಡೆಯುವ ಶಕ್ತಿಯು ಇಲ್ಲವಾಯಿತು. ಆದರೂ ತನ್ನ ಪ್ರತಿಜ್ಞೆಯನ್ನು ನೆರವೇರಿಸಲು ನಿಶ್ಚಯಿಸಿದನು. ಒಂದು ಸಂಘವು ದ್ವಾರಕೆಗೆ ಹೋಗುತ್ತಿತ್ತು, ಅದರೊಂದಿಗೆ ಪರ್ವತದಾಸನು ಹೊಂಟನು. ಸೂಟರಿಷ್ಟರು ಬಹಳ ತಡೆದರೂ ಪರ್ವತದಾಸನು ಕೇಳಲಿಲ್ಲ. ಗ್ರಾಮದಿಂದ ಮೂರು ಗಾವುದ ದೂರ ಹೋಗಿದ್ದನು ಅಷ್ಟಕ್ಕೇ ಸಾಕಾಯಿತು. ಉಸಿರು ಸಿಕ್ಕಿಕೊಂಡು, ಮುಂದೆ ನಡೆಯಲಾರದಾದನು ಅಲ್ಲೊಂದು ಛಾವಿ ಇದ್ದಿತು. ಅದರ ಬಳಿ ಪರ್ವತದಾಸನು ಸ್ವಲ್ಪ ವಿಶ್ರಾಂತಿಗೆ ನಿಂತನು. ಅಲ್ಲೇ ನಿದ್ರೆಯೂ ಬಂದಿತು. ಪರ್ವತದಾಸನು ದ್ವಾರಕಿಯ ವರೆಗೆ ಬರಲು ಸಾಧ್ಯವಿಲ್ಲವೆಂದು ತಿಳಿದು ಸಂಘವು ಪರ್ವತದಾಸನು ನಿದ್ರಿಸುತ್ತಿದ್ದಾಗ, ಮುಂದೆ ಹೊರಟು ಹೋಯಿತು. ಆ ಶರಣರಕ್ಷಕನಾದ ಭಗವಂತನು ಪರ್ವತದಾಸನಿಗೆ ಸ್ವಪ್ನದಲ್ಲಿ 'ನೋಮತಿಯೊಂದಿಗೆ ನಾನೇ ಮುಂದು ತಿಂಗಳಲ್ಲಿ ನಿನ್ನಲ್ಲಿಗೆ ಬರುತ್ತೇನೆ. ನೀನೀಗ ಮನೆಗೆ ಹೋಗು' ಎಂದು ಹೇಳಿದನು. ನಿದ್ರೆಯಿಂದ ಎಚ್ಚೆತ್ತ ಪರ್ವತದಾಸನ ಕನಸನ್ನು ಸ್ಮರಿಸಿಕೊಂಡು, ತನ್ನ ಊರಾದ ಮಾಂಗರೋಳಕ್ಕೆ ಹಿಂದಿರುಗಿದನು. ಆದರೆ ಭಗವಂತನ ಆಜ್ಞೆಯಿಂದ ಹಿಂದಿರುಗಿದ್ದಾನೆಂಬುದು ಬೇರೆಯವರಿಗೇನು ಗೊತ್ತು ? ಒಬ್ಬೊಬ್ಬರು ಒಂದೊಂದು ವಿಧವಾಗಿ ಹೇಳತೊಡಗಿದರು — 'ಏನಪ್ಪಾ ! ನೀನು ಒಂದೇ ದಿನದಲ್ಲಿ ದ್ವಾರಕಾ ಯಾತ್ರೆ ಮಾಡಿಕೊಂಡು ಬಂದು ಬಿಟ್ಟೆಯಾ ?'

'ಹೇಗೆ ಹೋಗಿದ್ದಿ, ಹೇಗೆ ಬಂದಿ ?'

'ಪ್ರಭುವು ನಿನ್ನನ್ನು ಕರೆದೊಯ್ಯಲು ಗರುಡನನ್ನು ಕಳಿಸಿದ್ದನೇ ?'

ಜನಗಳು ಏನೇ ಅನ್ನುತ್ತಿದ್ದರೂ ಪರ್ವತದಾಸನಿಗೆ ಅದರ ಪರಿವೆ ಇಲ್ಲ. ಆತನು ದಿನಗಳನ್ನು ಎಣಿಸುತ್ತಿದ್ದನು — ಹೂಂ, ಇನ್ನು, ಇಪ್ಪತ್ತೊಂಬತ್ತು ದಿನ ಉಳಿಯಿತು. ಹು. ಈಗಿನ್ನು ಇಪ್ಪತ್ತೆಂಟು ಉಳಿಯಿತು. ಹೀಗೇ ದಿನ ಲೆಕ್ಕಿ ಮಾಡುತ್ತಾ ಒಂದು ವಾರ ಕಳೆಯಿತು. 'ಎಂಟನೇ ದಿನ ದೀವ ದ್ವೀಪದಿಂದ ಸಿಂಹಾಸನವು ನಿನ್ನಲ್ಲಿಗೆ ಬರುತ್ತದೆ' ಎಂದೂ ಕನಸಾಗಿದ್ದಿತು. ಆದ್ರಿಂದ ಎಂಟನೇ ದಿನ ಸಿಂಹಾಸನ ಬರುವ ವಾರಿ ಕಾದುನೋಡುತ್ತಿದ್ದನು.

ಇದರಲ್ಲೂ ಒಂದು ಸೋಜಿಗ. ದೀವದಲ್ಲಿ ವಾಸುದೇವನೆಂಬೊಬ್ಬ ಭಕ್ತನಿದ್ದನು. ಈತನು ದ್ವಾರಕಾಧೀಶನಿಗಾಗಿ ಒಂದು ಸಿಂಹಾಸನವನ್ನು ತಯಾರಿಟ್ಟಿದ್ದನು, ಅದನ್ನೊಂದು ಹಡಗಿನಲ್ಲಿಟ್ಟು ದ್ವಾರಕಿಗೊಯ್ಯುತ್ತಿರಲು ಒಂದು ರಾತ್ರಿ ಕನಸಿನಲ್ಲಿ 'ಸಿಂಹಾಸನವನ್ನು ಮಾಂಗರೋಳಕ್ಕೆ ತೆಗೆದುಕೊಂಡು ಹೋಗು. ಅಲ್ಲಿ ಇರು ನಾನು ಅಲ್ಲಿಗೆ ಬರುತ್ತೇನೆ' ಎಂದು ಭಗವಂತನು ಆಜ್ಞೆ ಮಾಡಿದನು. ಕೂಡ್ಲೆ ವಾಸುದೇವನೆಂಬೀ ಭಕ್ತನು ಎಚ್ಚೆತ್ತು ಕನಸನ್ನು ಇತರರಿಗೆ ತಿಳಿಸಿದನು. ಆದರೆ ಯಾರೂ ಇದನ್ನು ನಂಬಲಿಲ್ಲ. ಹಡಗು ದ್ವಾರಕಿಗೆ ಪುನಃ ಮುಂದುವರಿಯಿತು. ಮಾಂಗರೋಳಿಗೇ ಸಿಂಹಾಸನವು ಹೋಗಬೇಕೆಂದು ಭಗವಂತನ ಇಚ್ಛೆ ಇದ್ದದ್ದರಿಂದ ಕೂಡ್ಲೆ ಬಿರುಗಾಳಿ ಎದ್ದಿತು. ಸಮುದ್ರವು ಅಲ್ಲೋಲ ಲೋಲವಾಗಿ, ಹಡಗು ನಾವಿಕರ ವಶದಿಂದ ತಪ್ಪಿ, ಎತ್ತೋ ಹೊರಟು ಹೋಯಿತು. ದೈವೇಚ್ಛೆಯಂತೆ ಹಡಗು ಮಾಂಗರೋಳದ ತೀರಕ್ಕೆ ಹೋಗಿ [illegible] ವಾಸುದೇವನಿಗೆ ಬಹ[illegible]

ಕನಸು ನಿಜವೆಂದು ನಮಂದಟ್ಟಾಯಿತು. ವಾಸುದೇವನು ಮಾಂಗರೋಳದಲ್ಲಿಳಿದು 'ಪರ್ವತದಾಸನೆಂಬ ಭಕ್ತನೆಲ್ಲಿದ್ದಾನೆ' ಎಂದು ಹುಡುಕಿದನು. ಇತ್ತ ಪರ್ವತದಾಸನು ಎಂಟನೇ ದಿನ ಸಿಹ್ಮಾಸನದ ಬರುವಿಕೆಯನ್ನು ಪ್ರತೀಕ್ಷಿಸುತ್ತಿದ್ದನು. ಪ್ರತಿಜ್ಞೆಗೆ ಸರಿಯಾಗಿ ಸಿಹ್ಮಾಸನವು ಬಂದೇಬಂದಿತು. ನೋಡಿ ಭಕ್ತನ ಆನಂದಕ್ಕೆ ಪಾರವೇ ಇಲ್ಲ. ಊರವರೆಲ್ಲರೂ ಸೋಜಿಗಗೊಂಡರು. ಜನರೆಲ್ಲರಿಗೂ ಈಗ ನಂಬಿಕೆಯಾಯಿತು.

ಇನ್ನು ಗೋಮತಿಯೊಂದಿಗೆ ದ್ವಾರಕಾಧೀಶನು ಯಾವಾಗ ಬರುತ್ತಾನೆಂದು ಎಲ್ಲರೂ ಕಾಯತೊಡಗಿದರು. ಪ್ರತಿಜ್ಞೆಗೆ ಸರಿಯಾಗಿ ಮತ್ತಾವತ್ತನೇ ದಿನ ರಾತ್ರಿ ಪರ್ವತದಾಸನ ಮನೆ[illegible]ಬಳಿಯ ಛಾವಿಯು ತಾನಾಗಿ ಉಕ್ಕಿ ನೀ[illegible]ಷ್ಟೆ ಬರತೊಡಗಿತು. ಬೆಳಗ್ಗೆ ಜನ[illegible]ಡು. ಎಲ್ಲರೂ ಗೆ[illegible]ಳೆಂದು ಸಂತೋಷಿಸ್ಪ[illegible]ನ ಮಾಡಿದರು. [illegible]ಶನು ಬರುವುದೊಂದು [illegible]ಭುವಿನ ಪ್ರೇಂಣಿಯಾಗಿ[illegible] ಅದೇ ಛಾವಿಯೊಳಗಿಳಿದನು. ಪ್ರತಿಜ್ಞೆಯು ನಿಜವಾಯಿತು. ದ್ವಾರಕಾಧೀಶನ ಮೂರ್ತಿಯು ಸಿಕ್ಕಿತು. ಸಂತೋಷದಿಂದ ಪರ್ವತದಾಸನು ಮೂರ್ತಿಯನ್ನು ತೆಗೆದುಕೊಂಡು ಮೇಲೆ ಬಂದನು. ಎಲ್ಲರೂ ಆನಂದದಿಂದ ಕುಣಿಯುತ್ತಿದ್ದರು.

ಪಶುಗಳ ಸತ್ಯವ್ರತದಿಂದಲೂ ತನ್ನ ಶಿವರಾತ್ರಿ ವ್ರತದಿಂದಲೂ ವ್ಯಾಧನ ಮನಸ್ಸು ತೀರ ಮೃದುವಾಗಿ ಹೋಗಿದ್ದಿತು. ಅವನು ತನ್ನ ಕರ್ಮಕ್ಕಾಗಿ ಪಶ್ಚಾತ್ತಾಪಿಸುತ್ತಿದ್ದನು. ಇಗ ಒಂದು ಪಶುವಿನ ಇಷ್ಟು ಸತ್ಯನಿಷ್ಠೆಯನ್ನು ನೋಡಿ, ಮತ್ತೂ ಕಾತರನಾಗಿಹೋಗಿ ಬಿಕ್ಕಿ ಬಿಕ್ಕಿ ಅಳಲಿಕ್ಕಾರಂಭಿಸಿದನು.

'ನಿಜವಾಗಿಯೂ ನೀವುಗಳು ಧನ್ಯರು ! ನನ್ನ ಜ್ಞಾನನೇತ್ರಗಳನ್ನು ನೀವೇ ತೆರೆಸಿದಿರಿ. ನನಗೀಗ ಸಂಸಾರವೂ ಮಿಥ್ಯೆಯಾಗಿ ತೋರುತ್ತಿದೆ. ಹಂತವಾಗಲೀ ಹಂತವ್ಯವಾಗಲೀ ಯಾವುದೂ ಹೊಳೆಯುವುದಿಲ್ಲ. ಎಲ್ಲದರಲ್ಲಿಯೂ ಒಂದೇ ಒಂದು ಶಕ್ತಿ ಕುಳಿತಿರುವುದು ಕಾಣಿಸುತ್ತಿದೆ. ಒಂದು ವೇಳೆ ನಾನು ಯಾರನ್ನಾದರೂ ಕೊಲ್ಲುವುದಾದರೆ ನನ್ನನ್ನೇ ಕೊಲ್ಲಬಲ್ಲೆ. ಹೋಗಿರಿ ನೀವುಗಳು ಸುಖವಾಗಿ ಇದ್ದುಕೊಳ್ಳಿರಿ. ಲೋಕವು ಸುಖವಾಗಿರಲಿ, ಅದಕ್ಕೆ ಯಾವುದೇ ಬಗೆಯ ವ್ಯಾಧಿಗಳು ಬಾರದಿರಲಿ. ಎಲ್ಲರೂ ಒಳ್ಳಿತನ್ನೇ ಕಾಣಲಿ, ದುಃಖವು ಲೋಕದಿಂದ ದೂರವಾಗಲಿ. 'ಸರ್ವೇಽತ್ರೈವ ವಿಶಃಸನ್ತು ಸರ್ವೇಸಾನ್ತು ನಿರಾಮಯಾಃ| ಸರ್ವೇಭದ್ರಾಣಿಪಶ್ಯನ್ತು ಮಾ ಕಶ್ಚಿದ್ದುಃಖಭಾಗ್ಭವೇತ್ ॥' — ವ್ಯಾಧನು ಉಸುರಿದನು.

[illegible]ಂದ ವಿಮಾನ ತಮ್ಮ ತಮ್ಮ ದಿವ್ಯ ನದಲ್ಲಿ ಕ್ಷಿಂ ಬ್ಧಂ

Save
ಗೋ ವಧೆ

ಗೂಂಡಾ ನಾಯಕ

ವಾರಂಗಲ್ಲಿನಲ್ಲಿ ಗೂಂಡಾನಾಯಕ ಪಾಸಿಂ ಪರೀಫ್ ಕರಿಯ ಬಣ್ಣದ ಸೂಟನ್ನು ಧರಿಸಿ ಮೈತುಂಬಾ ರಿವಾಲ್ವರುಗಳೊಂದಿಗೆ ಕುದುರೆ ಮೇಲೆ ಕೂತು ಬೀದಿಬೀದಿಗಳಲ್ಲಿ ತಿರುಗುತ್ತಿದ್ದಾನೆ. ಹಿಂದೆ ಮೂಗಲಯ್ಯನೆಂಬ ಸತ್ಯಾಗ್ರಹಿಯನ್ನು ಈತನೇ ಹಗಲಿನಲ್ಲಿಯೇ ಹತ ಮಾಡಿದನು. ಇತರ ಗೂಂಡಾಗಳು ಕತ್ತಿಗಳನ್ನು ಕಂಕುಳಲ್ಲಿಟ್ಟುಕೊಂಡು ಸೈಕಲ್ಲು ಮೇಲೆ ತಿರುಗುತ್ತಿರುವರು ಎಂದು ಜ್ವಾಲಾ ಪತ್ರಿಕೆ ಪ್ರಕಟಿಸಿದೆ

ಹುಬ್ಬಳ್ಳಿ ಅ 1 — ಮೈಸೂರು ಸರ್ಕಾರ ಇತ್ತೀಚೆಗೆ ತೊಂದರೆಗೊಳಗಾದ ಪ್ರದೇಶವೆಂದು ಸಾರಿದ ಚಿತ್ರದುರ್ಗ ಜಿಲ್ಲೆಯ ಅನೇಕ ಭಾಗಗಳಿಂದ ಬರುತ್ತಿರುವ ವರದಿಗಳಿಂದ, ಹಳ್ಳಿಗರು ಅನೇಕ ಪೋಲೀಸರುಗಳನ್ನು ದಸ್ತಗಿರಿ ಮಾಡಿರುವುದಾಗಿಯೂ ಮತ್ತು ಸ್ಥಾನಬದ್ಧತೆಯಲ್ಲಿಟ್ಟಿರುವುದಾಗಿಯೂ, ಅವರುಗಳ ಆಯುಧ ಮತ್ತು -ಯೂನಿಫಾರಂಗಳನ್ನು ಕಿತ್ತುಕೊಂಡಿರುವುದಾಗಿಯೂ ತಿಳಿದು ಬಂದಿದೆ ಶಿಕಾರಿಪುರವನ್ನು ಹರಿಹರ ತಾಲ್ಲೂಕಿನ ಹಳ್ಳಿಗಳ ಪರಿಸ್ಥಿತಿ ಸ್ವಲ್ಪ ಎಷ್ಟಮ ದಯೆ ಬೇಡಿದವರನ್ನು ಕೆಲಸಕ್ಕೆ ಕೂಡಲೇ ರಾಜೀನಾಮೆ ಕೊಡಿ ಎಂದು ಎಚ್ಚರಿಸಿ ಬಿಟ್ಟರು

ಮುಸ್ಲಿಂ ಗೂಂಡಾಗಳಿಂದ ಹಿಂಸೆ

ಹೈದರಾಬಾದ್‌ನಲ್ಲಿ ಹೋರಾಟದ ಹೊಸಘಟ್ಟ

ಅಕ್ಟೋಬರ್ 1 ಹೈದರಾಬಾದ್ ಸಂಸ್ಥಾನ ಕರಂಗ್ರೆಸ್ ಕ್ರಿಯಾ ಸಮಿತಿ ದಬ್ಬಾಳಿಕೆ ವಿರೋಧ ದಿನಾಚರಣೆ ಆಚರಿಸಬೇಕೆಂದು ನಿಯಮಿಸಲ್ಪಟ್ಟಿರುವ ಈ ದಿವಸದಿಂದ ಹೈದರಾಬಾದ್ ಸ್ವಾತಂತ್ರ್ಯ ಹೋರಾಟದಲ್ಲಿ ನೂತನ ಘಟ್ಟದ ಕುರುಹುಗಳನ್ನು ನಿರೀಕ್ಷಿಸಲಾಗಿದೆ

ಅಕ್ಟೋಬರ್ ತಾ ॥ 1 ರಿಂದ ಆರಂಭವಾಗುವ ಹೋರಾಟದ ನೂತನ ಘಟ್ಟದಲ್ಲಿ ವಿದ್ಯಾರ್ಥಿಗಳಾದಿಯಾಗಿ ಸರ್ವರೂ ಸೇರುವರೆಂದು ನಿರೀಕ್ಷೆ

ಬಿಜವಾಡ ಸೆ 28 — ಮುಸ್ಲಿಂ ಗೂಂಡಾಗಳು ನಿಜಾಂ ನಗರಪಾಲಿಕೆಯಲ್ಲಿ ಉನ್ನತ ಅಧಿಕಾರಿಗಳು ಮತ್ತು ಪೋಲೀಸರುಗಳಿಂದ ಉತ್ತೇಜಿಸಲ್ಪಟ್ಟು ಸರಣಿಗವಾಗಿ ಮೆರೆಯುತ್ತಾ ಹಿಂದೂ ಅಧಿಕಾರಿಗಳನ್ನು ಹಿಂಸಿಸುತ್ತಿರುವುದಾಗಿ ವರ್ತಮಾನ ಬಂದಿದೆ

ಗೂಂಡಾರಾಜ್ಯದಲ್ಲಿ ಸ್ತ್ರೀಯರ ದುಸ್ಸ್ಥಿತಿ

ಕಲ್ಲಾಡ ಗ್ರಾಮದಲ್ಲಿ ಅಯೋಧ್ಯರಾಮಯ್ಯನೆಂಬ ಸ್ಥಾನಿಕನ ಹೆಂಡತಿಯ ಮೇಲೆ ದೌರ್ಜನ್ಯವನ್ನು ಮಾಡಲ್ಮಾನರಿಗೆ ಮುಸ್ಲಿಂ ಸ್ತ್ರೀ ಸಹಾಯ ಮಾಡಿದರೆಂದು 'ಜ ಪತ್ರಿಕೆಯಲ್ಲಿ ತಿಳಿಸಿದೆ. ಈ ಸಾಂ ಇಲಾಖೆಯಲ್ಲಿರು

ಮೆರವಣಿಗೆ

ಮೈಸೂರು ಅ 1 — ನೂರಡಿ ರಸ್ತೆಯ ಪಂಚಲಾಂಧ್ರದಿಂದ ಸುಬ್ಬಾಯನ ಕೆರೆ ವರೆಗೆ ವಿದ್ಯಾರ್ಥಿಗಳ ಮೆರವಣಿಗೆಯೊಂದು ನಿನ್ನೆ ಸಂಜೆ ಘೋಷಣೆಗಳೊಡನೆ ಹೊರಟಿದ್ದ ದಾರಿ ಲ್ಲುಗಳನ್ನು

ಚಿಕ್ಕವೀ ಬಿ ಜಿ ಪುರ

ಮೆರವಣಿಗೆ

ಮೈಸೂರು ಅ 1 — ನೂರಡಿ ರಸ್ತೆಯ ಪಂಚಲಾಂಧ್ರದಿಂದ ಸುಬ್ಬಾಯನಕೆರೆ ವರೆಗೆ ವಿದ್ಯಾರ್ಥಿಗಳ ಮೆರವಣಿಗೆಯೊಂದು ನಿನ್ನೆ ಸಂಜೆ ಘೋಷಣೆಗಳೊಡನೆ ಹೊರಟಿದ್ದ ದಾರಿಯಲ್ಲುಗಳನ್ನು

ಗಾಂಧೀಜಿ ಮೆರವಣಿಗೆ

ಕನ್ನೇಗೌಡನ ಕೊಪ್ಪಲಿನವರು ನಿನ್ನೆ ಗಾಂಧೀ ಜಯಂತಿಯನ್ನು ವೈಭವದಿಂದ ಆಚರಿಸಿದರು ಐದು ಜೊತೆ ಎತ್ತಿನ ರಥದಲ್ಲಿ ಮೆರವಣಿಗೆ ಹೊರಟಿತು ಮಾರುಕಟ್ಟೆಗೆ ಮೆರವಣಿಗೆ ಬಂದಾಗ ಒಂದು ಕೋತಿ ಒಬ್ಬಾತನ ಭುಜದ ಮೇಲೆ ಕುಳಿತಿತು ಹಾರಹಾಕಿ ಮೆರವಣಿಗೆ ಜೊತೆ ಅದನ್ನು ಕರೆದೊಯ್ಯಲಾಯಿತು

ಗಾಂಧೀಜೀಯವರ ಅಮೃತವಾಣಿ

ನೀವು ಸ್ವತಂತ್ರರೆಂದು ಭಾವಿಸಿಕೊಳ್ಳಿ, ಹಾಗೆಯೇ ನಡೆಯಿರಿ. ನೀವು ತಪ್ಪದೇ ಸ್ವತಂತ್ರರೇ. ಸ್ವಾತಂತ್ರ್ಯವು ನಿಮ್ಮ ಕೈಯಲ್ಲಿಯೇ ಇದೆ

ಗೋಳೀಬಾರ್ ಹೊಸದುರ್ಗದಲ್ಲಿ

ಬೆಂಗಳೂರು ಸೆ 30 — ಹೊಸದುರ್ಗ ಪೋಲೀಸು ಸ್ಟೇಷನ್ ಮಕ್ತುತಾಲ್ಲೂಕು ಆಫೀಸುಗಳನ್ನು ಗುಂಪು ಮುತ್ತಿದಾಗ ಪೋಲೀಸರು ಗುಂಡು ಹಾರಿಸಿದ ಪ್ರಯುಕ್ತ ಐದು ಮಂದಿ ಸತ್ತು ಏಳು ಮಂದಿ ಗಾಯಗೊಂಡರು.

ಜನಾಬ್ದಾರಿ ಸರಕಾರ

ಪುದುಕೋಟೆ ಸೆ 27— ಪುದುಕೋಟೆ ಪ್ರಭುಗಳು ಪೂರ್ಣ ಜವಾಬ್ದಾರಿ ಸರಕಾರ ಘೋಷಣೆ ಮಾಡಿದರು.

ಅಕ್ಕಿ ರೇಷನ್ ತಗ್ಗಿತು

ಮೈಸೂರಿನಲ್ಲಿ ಅಕ್ಕಿ ರೇಷನ್ 10 ಔನ್ಸಿನಿಂದ 8 ಔನ್ಸಿಗೆ ಇಳಿಸಲಾಗಿದೆ.

ಜನರೇ ಜವಾಬ್ದಾರರು

ದೆಹಲಿಯಲ್ಲುಂಟಾಗಿರುವ ನಷ್ಟವನ್ನೆಲ್ಲಾ ಜನರೇ ಕಟ್ಟಿಕೊಡಬೇಕೆಂದು ಪಂ ॥ ನೆಹರು ತಿಳಿಸಿದ್ದಾರೆ

!

ಮೈಸೂರು ಪ್ರಜಾಪ್ರತಿನಿಧಿ ಸಭೆ ಸದಸ್ಯರೂ, ವಿಶ್ವವಿದ್ಯಾನಿಲಯ ಆಡಳಿತ ಸಭೆಯ ಸದಸ್ಯರೂ, ನಗರಪಿತೃಗಳೂ, ಮಹಾರಾಜ ಕಾಲೇಜ್ ಸಂಘದ ಸದಸ್ಯರೂ, ಅರಸು ಕೋವಿಯ ಪ್ರಮುಖರೂ ಮತ್ತು ಇತರ ಅನೇಕಾನೇಕ ಸಂಘಗಳ ಸದಸ್ಯರೂ ಆದ ಶ್ರೀ ಎಫ್. ಸಿ. ದೇವರಾಜೆ ಅರಿಸಿನವರು ಶ್ರೀಮಹಾರಾಜರವರ ಪಟ್ಟಾಭಿಷೇಕ ದಿನಾಚರಣೆ ದಿವಸ ಆಕಾಶವಾಣಿಯಿಂದ ಪ್ರಸಾರ ಮಾಡಿದ್ದ ಭಾಷಣದ ತುಂಡು:

ಗಾಂಧಿಯವರಿಂದ ನಾಮಾಂಕಿತವಾದ ರಾಮರಾಜ್ಯ ಮೈಸೂರಿನ ಪ್ರಜೆಗಳು ಭಗವದನುಗ್ರಹದಿಂದ ನೆಮ್ಮದಿಯುದನ್ನು ನೋಡಿ ಸಹಿಸಲಾರದೆ ಅಸೂಯಾಪರರೂ, ಅಧಿಕಾರಿಗಳೂ, ಕ್ರಾಂತಿಕಾರರೂ ಮೈಸೂರಿನ ಉನ್ನತಿಗೆ ಭಂಗತಂದು ತಮಗಾಗಿ ಗೊಂದಲಗಳನ್ನು ಹಚ್ಚಿ, ಏನೂ ತಿಳಿಯದ ರೈತರುಗಳಿಗೂ ಕಾರ್ಮಿಕರಿಗೂ ಇನ್ನು ಇತರ ಕೂಲಿಗಾರರಿಗೂ ಧನೆಗಳನ್ನು ನಷ್ಟ ನಷ್ಟಗಳಿಗೆ ಗುರಿಪಡಿಸುತ್ತಿರುವರು ಜನೀಯವಾ

ಗಾಂಧಿ ಹುಟ್ಟಿದ

ಮೈಸೂರು ಸೆ 3

ನಿನ್ನೆ ರಾಜಧಾನಿಯಲ್ಲಿ ಮಹಾತ್ಮ ಗಾಂಧಿಯವರ ಹುಟ್ಟಿದ ಹಬ್ಬ ಸಮಾಧಾನ ಸಂತೃಪ್ತಿಗಳಿಂದ ಸಕಲೆಡೆಯಲ್ಲೂ ಸಾಂಗವಾಗಿ ನೆರವೇರಿತು. ಪೋಲೀಸರು ಶಾಂತಮೂರ್ತಿಗಳಂತೆ ವರ್ತಿಸಿದರು. ! ಸಾರ್ವಜನಿಕರು ಸಭ್ಯ ವರ್ತನೆಯನ್ನು ಪ್ರದರ್ಶಿಸಿದರು! ಸುಬ್ಬರಾಯನಕೆರೆ ಸ್ವರ್ಗಸಮನಾದ ಸೌಂದರ್ಯದಿಂದ ಕಂಗೊಳಿಸಿತು! ಧ್ವಜಗಳ ಹಾರಾಟವೇನು! 'ಝಂಡಾಉಂಚೇರಹೇ ಹಮಾರ' ಗೀತೆಗಳೇನು! ನಾರಿಯರುಗಳ ಮುಖಗಳೇನು! ಸೂರಾರು ಮಂದಿಯ ನವ್ಯ ಭಕ್ತಿಪ್ರದರ್ಶನಗಳೇನು! ಅರಮನೆಯಲ್ಲಿ ದೀಪೋತ್ಸವ! ನೆರೆಮನೆಯಲ್ಲಿ ಜಯಂತ್ಯೋತ್ಸವ! ಆಕಾಶವಾಣಿಯಲ್ಲಿ ವಿಶೇಷೋತ್ಸವ. ! ಪತ್ರಿಕೋದ್ಯೋಗಿ ಸಂಘದಲ್ಲಿ ಪೂಜ್ಯೋತ್ಸವ! ವಿದ್ಯಾರ್ಥಿ ಕಾಂಗ್ರೆಸ್ಸಿನ ವೈಭವೋತ್ಸವ! ನಗರ ಕಾಂಗ್ರೆಸ್ಸಿನ ನವಚೈತನ್ಯೋತ್ಸವ! ಮಹಿಳೆಯರ ಮಂಗಳೋತ್ಸವ! ಬೀದಿಬೀದಿಗಳಲ್ಲಿ ರಥೋತ್ಸವ! 'ಇವಿ ಪ್ಪಾ ಬಾಪುವಿನ ಜನ್ಮೋತ್ಸವ ನಿಮಿತ್ತ! ಬಾಪೂ ಹುಟ್ಟಿದ ಹಬ್ಬವನ್ನು ರಾಜಧಾನಿಗರು ಇಷ್ಟರಮಟ್ಟಿಗೆ ಆಚರಿಸಿದ್ದಕ್ಕಾಗಿ, ಸಾರ್ವಜನಿಕರೂ, ಸರಕಾರದವರೂ, ಸಕಲ ಕೋವಿನವರೂ ಅಭಿನಂದನಾರ್ಹರು. ದಿನವೂ ನಮ್ಮೂರು ಹೀಗೇ ನಲಿದಾಡಲಿ. ಜವಾಬ್ದಾರಿ ಸರಕಾರವೂ ಹೀಗೇ ಶಾಂತಯುತವಾಗಿ ಸ್ಥಾಪಿತವಾಗಲಿ ಎಲ್ಲೆಲ್ಲೂ ಗಾಂಧೀಜೀ ತಪಸ್ಸಿನ ಫಲವಾಗಿ ಸೌಖ್ಯ ಸಂರಂಭಗೊಳ್ಳಲಿ ಎಂದಿಷ್ಟೇ ನಮ್ಮ ಹಾರೈಕೆ.

ಬಲತ್ಕಾರದಿಂದ ಧಾನ್ಯ ಪಡೆದರು

ಮಂಡ್ಯ ಸೆ 27 — ಮಂಡ್ಯಾ ಸಮೀಪ ಹಳ್ಳಿಯೊಂದರ ರೈತರು ಉಳುವರಿ ಧಾನ್ಯ ಧಾಸ್ತಾನನ್ನು ಸರ್ಕಾರಕ್ಕೆ ಕೊಡಲು ನಿರಾಕರಿಸಿದರು ಸೇನೆಯ ಸಹಾಯದೊಡನೆ ಅವರಲ್ಲಾರರು ಉಳುವರಿಯನ್ನು ರೈತರಿಂದ ಬಲತ್ಕಾರದಿಂದ ಪಡೆದರು

ಸು ದ್ದಿ ....ಳು

ಹೈದರಾಬಾದ್, ಅ 2 — ಸಂಯುಕ್ತ ಪ್ರಾಂತ್ಯದ ಗವರ್ನರ್ ಹರ್ ಎಕ್ಸ್‌ಲೆನ್ಸಿ ಸರೋಜಿನಿ ನಾಯ್ಡುರವರ ಪುತ್ರಿ ಶ್ರೀಮತಿ ಪದ್ಮಜಾನಾಯ್ಡು ಮತ್ತಿತರು ಆಜ್ಞೋಲ್ಲಂಘನೆ ಬಗ್ಗೆ ದಸ್ತಗಿರಿಯಾದರು. ವಾರಂಗಲ್ ಇತ್ಯಾದಿ ಜಿಲ್ಲೆಗಳಲ್ಲಿ ಗ್ರಾಮಾಧಿಕಾರಿಗಳು ತಮ್ಮ ವೃತ್ತಿಗೆ ರಾಜೀನಾಮೆ ಕೊಡುತ್ತಿದ್ದಾರೆ.

ನ್ಯೂಯಾರ್ಕ್ ಅ 3 — ಪ್ಯಾಲಸ್ಟೈನ್ ವಿಭಜನೆಗೆ ಯಹೂದಿಗಳು ಒಪ್ಪಿಗೆ ಇತ್ತಿದ್ದಾರೆ.

ಬೆಂಗಳೂರು, ಅ 3 .... ಸತ್ಯಾಗ್ರಹ ಸಂಬಂಧದಲ್ಲಿ ದಸ್ತಗಿರಿ ಮಾಡಲ್ಪಟ್ಟ ದ್ವಮುಹಿಳಾ ಖೈದಿಗಳ ಬಿಡುಗಡೆಗೆ ಆಜ್ಞೆಯಾಗಿದೆ.

ಮಾರ್ಷಲ್ ಲಾ ಯಾವುದೇ ಬಗೆಯಲ್ಲೂ ಸಂಸ್ಥಾನದ ಯಾವ ಭಾಗದಲ್ಲೂ ಜಾರಿ ಮಾಡುವ ಪ್ರಶ್ನೆಯೇ ಇಲ್ಲವೆಂದು ಹೇಳಲಾಗಿದೆ.

ಮೈಸೂರು ಕಾಂಗ್ರೆಸ್ ಸತ್ಯಾಗ್ರಹಕ್ಕೆ ಬೆಂಬಲಿಸಿ ಉಡುಪಿ ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಪಕ್ಷಗಳು ನಿರ್ಣಯಿಸಿವೆ.

ಸುದ್ದಿಗಳು

ನವದೆಹಲಿ, ಅ 2 .... ಮಹಾತ್ಮ ಗಾಂಧೀಜೀಯವರಿಗೆ ವಿಶ್ವದ ನಾನಾ ಕಡೆಗಳಿಂದ ಜನ್ಮೋತ್ಸವ ಬಗೆಗೆ ಶುಭಾಶಯಗಳು ಬಂದಿವೆ.

ಕುಡಿತ ನಿಂತಿತು

ಮದರಾಸು ಸರಕಾರ ಮತ್ತೆ 7 ಜಿಲ್ಲೆಗಳಲ್ಲಿ ಸಂಪೂರ್ಣ ಪಾನನಿರೋಧ ಜಾರಿಗೆ ತಂದಿದೆ, ಇನ್ನು ಎಂಟು ಜಿಲ್ಲೆಗಳಲ್ಲಿ ಮಾತ್ರವಿದೆ ಕುಡಿತ.

17 ಕೋಟಿ ರೂ. ಗಳಷ್ಟು ಆದಾಯ ಪಾನನಿರೋಧ ಜಾರಿಯಿಂದ ಸರಕಾರಕ್ಕೆ ನಷ್ಟವಾಗುತ್ತದೆ.

ಪಾನನಿರೋಧ ಅಧಿಕಾರಿಗಳಲ್ಲಿ ಹಲವಂಬಗ್ಗೆ, ಪ್ರಧಾನಿಗಳು ನಿವು ಮುಂಚೆ ತಿಳಿದುಕೊಳ್ಳದಿದ್ದರೆ ಅಧಿಕಾರ ತ್ಯಜಿಸಿ, ಎಂದು ಎಚ್ಚರಿಸಿದ್ದಾರೆ.

ಕುಡಿತ ನಿರೋಧದ ಬಗ್ಗೆ ಮಧುರಾ ಹರಿಜನಸ್ತ್ರೀಯರು ಅಮಿತಾನಂದ ಪ್ರದರ್ಶಿಸಿದರು.

ತಿರುಚನಾಪಳ್ಳಿಯಲ್ಲಿ ಕುಡಿತದ ಅಂಗಡಿಗಳಲ್ಲಿ ಚಹಾ ಬಿಟ್ಟೇ ಹಂಚಿದರು.

ಇವೆಲ್ಲಾ ಆಚರಣೆಗೆ ಬರುತ್ತಿರುವುದು ಕಾಂಗ್ರೆಸ್ ರಾಜ್ಯದಲ್ಲಿ!

ಕೋಲಾರ ಸೆ 29 — ದಿವಾನರನ್ನು ಅಭಿನಂದಿಸುವ ನಿರ್ಣಯ ಪುರಸಭೆಯಲ್ಲಿ ಮಂಡಿಸಿದಾಗ ತೀವ್ರ ಪ್ರತಿಭಟನೆ ಎದ್ದು ನಿರ್ಣಯವನ್ನು ವಾಪಸ್ ಪಡೆಯಲಾಯಿತು

ಉಮ್ಮಾರಿ ಮತ್ತು ಪಟಾರ್ಡೆ ಹಳ್ಳಿಯ ಇನ್ನೂರು ಮಂದಿಯ ಮೇಲೆ ಹೈದರಾಬಾದ್ ಪೋಲೀಸ್ ಗುಂಡು ಹಾರಿಂದ ಪ್ರಯುಕ್ತ 12 ಮಂದಿ ಸತ್ತು 39 ಮಂದಿ ಗಾಯಗೊಂಡರು.

Edited, Printed and Published by M. S Krishna Rao at the Satyavadi Press Chamaarja Agrahar Mysore.

ಗ್ರೈಪ್ ಸಿರಪ್

ಟ್ರೇಡ್ ITL ಮಾರ್ಕ್

ಎಳೆಯ ಮಕ್ಕಳ ಜೀರ್ಣಶಕ್ತಿಯನ್ನು ಬಲಪಡಿಸುವ ಔಷಧಬತ್ತು. ಗ್ರೈಪ್ ಸಿರಪ್ ರುಚಿ ಸಿಹಿಯಾಗಿಯೂ ಮತ್ತು ಆಹ್ಲಾದ ಉಂಟುಮಾಡುವುದಾಗಿಯೂ ಇರುವುದರಿಂದ ಮಕ್ಕಳ ಸೇವನೆಗೆ ಅನುಕೂಲವಾದುದು.

ಪ್ರತಿಯೊಬ್ಬ ತಾಯಿಯೂ ಮನೆಯಲ್ಲಿ ಈ ಔಷಧಬತ್ತಿನ ಸೀಸೆ ಒಂದನ್ನು ಯಾವಾಗಲೂ ಕೈಗಾವಲಾಗಿಟ್ಟಿರುವುದು ಅತ್ಯವಶ್ಯಕ.

ಎಲ್ಲಾ ಪ್ರಮುಖ ಔಷಧವ್ಯಾಪಾರಿಗಳಲ್ಲಿಯೂ ಸುಲಭ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd..

Malleswaram P. O. Bangalore

SAVE THE COW

॥ ವಂದೇ ಮಾತರಂ ॥

ಶ್ರೇಷ್ಠವಾದ

ರಾಜಪುರಿ ಹೊಗೇಸೊಪ್ಪಿನಿಂದ

— ತಯಾರಿಸಲ್ಪಟ್ಟದು —

ಕಾಂಗ್ರೆಸ್

(ರಿಜಿಸ್ಟರ್ಡ್)

ಮಂಗಳೂರು

ಬೀಡಿಗಳು

ಜೆ ಎಸ್. ಟೊಬ್ಯಾಕೊ ವರ್ಕ್ಸ್

ಬೆಸ್ ಟರ್ವಿನಸ್. ಮೈಸೂರು

ಶ್ರೀ 'ಓಂ' ಗುರುತಿನ

ಅರಿಸಿ ಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗ ಅರಿಸ ತೆಗೆಯು ಎನೆಂ ರ್ಥವೂ ಕವಾಗಿ . ದೇ ಗಳಲ್ಲಿಯ ಪಲ್ಲ

ವಾಲಯಗಳಲ್ಲಿಯೂ ದೇವರ ಎಲ್ಲ ಸಂತೋಷ ವಾಂಛಿ ದ್ದಾಗಿದೆ.

(ಹಿ ಗೋವಿಂದ

SHAKTI SUDHA

A Superb T